ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿರುವುದು ಒಳ್ಳೆಯದಾಗಿದೆ. ಉಳಿದೆಲ್ಲ ಮಾಹಿತಿ ಜೊತೆಗೆ ಪ್ರತ್ಯೇಕ ಉತ್ತರವನ್ನು ಕೊಡುತ್ತೇನೆಂದು ಹೇಳಿರುವುದು ಸ್ವಾಗತಾರ್ಹವಾದಂಥದು. ಆದರೆ, ಇದರಿಂದ ಆಗತಕ್ಕಂತಹ ತೊಂದರೆಗಳ ಬಗ್ಗೆ ಹೇಳುವುದಾದರೆ,...

ಅಧ್ಯಕ್ಷರು : ಈ ವಿಷಯವನ್ನು ಆಮೇಲೆ ನೋಡೋಣ. ಈಗ ಬೇಡ. ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿದ್ದೇನೆ.

ಪದವಿ ಕಾಲೇಜುಗಳ ಹೊಸ ಕಟ್ಟಡಗಳು

39(333) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಹೊಸ ಪದವಿ ಕಾಲೇಜುಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ ;

(ಆ) ಮಂಜೂರಾದ ಕಾಲೇಜುಗಳಿಗೆ ಹೊಸ ಕಟ್ಟಡ ನಿರ್ಮಿಸಲು ಎಷ್ಟು ಅನುದಾನ ಮಂಜೂರಾಗಿದೆ ; (ವಿವರ ನೀಡುವುದು)

(ಇ) ಹೊಸ ಕಟ್ಟಡಗಳ ಕಾಮಗಾರಿಗಳು ಯಾವ ಹಂತದಲ್ಲಿವೆ ; ನಿರ್ಮಾಣ ಕಾಮಗಾರಿಯು ತುಂಬಾ ನಿಧಾನಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ನಿಗದಿತ ಸಮಯದಲ್ಲಿ ಕಟ್ಟಡಗಳ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು) :–

(ಅ) 52 ಹೊಸ ಸರ್ಕಾರಿ ಪದವಿ ಕಾಲೇಜುಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ ಹಾಗೂ 02 ಖಾಸಗಿ ಅನುದಾನಿತ ಕಾಲೇಜುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗಿದೆ.

(ಆ) ತುಮಕೂರು ಪದವಿ ಕಾಲೇಜಿಗೆ ರೂ. 350.00 ಲಕ್ಷ ವೆಚ್ಚದಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕೆ ಮತ್ತು ರೂ. 60.00 ಲಕ್ಷ ವೆಚ್ಚದಲ್ಲಿ ಪ್ರಯೋಗಾಲಯ ನಿರ್ಮಾಣ ಮಾಡಲು ಅನುದಾನ ಮಂಜೂರಾಗಿದೆ. ತಿಳುವಳ್ಳಿ ಕಾಲೇಜಿಗೆ ರೂ. 200.00 ಲಕ್ಷ ವೆಚ್ಚದಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕೆ ಅನುದಾನ ಮಂಜೂರಾಗಿದೆ. ಸೋಮವಾರಪೇಟೆ

ಮತ್ತು ಚಿಕ್ಕಬಳ್ಳಾಪುರ ಮಹಿಳಾ ಕಾಲೇಜುಗಳು ಸ್ವಂತ ಕಟ್ಟಡ ಹೊಂದಿರುತ್ತವೆ. ಇನ್ನುಳಿದ ಕಾಲೇಜುಗಳಿಗೆ ನಿವೇಶನ/ಅನುದಾನದ ಲಭ್ಯತೆಯನ್ನಾಧರಿಸಿ ಹೊಸ ಕಟ್ಟಡ ನಿರ್ಮಿಸಲಾಗುವುದು.

(ಇ) ಬಂದಿದೆ. ತುಮಕೂರು ಹೊಸ ಕಾಲೇಜಿನ ಕಟ್ಟಡ ಕಾಮಗಾರಿ ಶೇ. 60 ರಷ್ಟು ಪೂರ್ಣಗೊಂಡಿದೆ. ಪ್ರಯೋಗಾಲಯದ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು ವಿದ್ಯುದೀಕರಣ ಕಾಮಗಾರಿ ಮಾತ್ರ ಬಾಕಿ ಇರುತ್ತದೆ. ತಿಳುವಳ್ಳಿ ಕಾಲೇಜಿನ ಹೊಸ ಕಟ್ಟಡ ಕಾಮಗಾರಿಯು ಕಾಲಂಪುಟಿಂಗ್ ಕಾಂಕ್ರೀಟ ಕೆಲಸ ನಡೆಯುತ್ತಿದೆ.

(ಈ) ಪ್ರತಿ ಮಾಹೆಯಾನ ಕಟ್ಟಡ ಪ್ರಗತಿ ಪರಿಶೀಲನಾ ಸಭೆ ನಡೆಸಲಾಗುತ್ತಿದ್ದು ನಿಗದಿತ ಅವಧಿಯಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಳಿಸಲು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ಆದರೆ, ನನ್ನ ಪ್ರಶ್ನೆ ಏನೆಂದರೆ ನನ್ನ ಕ್ಷೇತ್ರವಾದ ಭಾಲ್ಕಿ ಮತ ಕ್ಷೇತ್ರದಲ್ಲಿ ಎರಡು ವರ್ಷದ ಹಿಂದೆ ಪದವಿ ಕಾಲೇಜಿನ ಹೊಸ ಕಟ್ಟಡದ ನಿರ್ಮಾಣದ ಕೆಲಸ ಪ್ರಾರಂಭವಾಗಿದೆ. ಈ ಕೆಲಸಕ್ಕೆ 2 ಕೋಟಿ ರೂಪಾಯಿ ಅನುದಾನ ಕೂಡ ಬಂದಿದೆ. ಒಂದು ವರ್ಷದಲ್ಲಿ ಮುಗಿಸಬೇಕಾಗಿದ್ದ ಪದವಿ ಕಾಲೇಜಿನ ಕಟ್ಟಡದ ನಿರ್ಮಾಣದ ಕೆಲಸ ಇವತ್ತೂ ಕೂಡ ಅದು foundation stage ನಲ್ಲಿಯೇ ಇದೆ. ಈ ಕೆಲಸವನ್ನು ಯಾವ ಸಂಸ್ಥೆಗೆ ಕೊಡಲಾಗಿದೆ ಎಂದು ಮತ್ತು ಇದನ್ನು ಯಾರು ನಿರ್ವಹಣೆ ಮಾಡುತ್ತಿದ್ದಾರೆಂದು ಹಾಗೂ ಇದರ ಗುತ್ತಿಗೆದಾರರು ಯಾರಿದ್ದಾರೆಂದು ಗೊತ್ತಿಲ್ಲ. ಅಲ್ಲಿ ನಿರ್ಮಾಣ ಮಾಡುತ್ತಿರುವ ಕಟ್ಟಡದ ಕೆಲಸ ಕಾಲಂನವರಿಗೆ ಬಂದಿದೆ. ಈಗ ಆಗಿರುವ ಕೆಲಸ ಕಳಪೆ ಮಟ್ಟದಿಂದ ಕೂಡಿದೆ ಎಂದು ದೂರುಗಳು ಬಂದಿವೆ. ಗಡಿ ಪ್ರದೇಶ, ಹಿಂದುಳಿದ ಪ್ರದೇಶದಲ್ಲಿರುವ ಹೊಸ ಪದವಿ ಕಾಲೇಜಿಗೆ ಕಟ್ಟಡದ ವ್ಯವಸ್ಥೆ ಇಲ್ಲದೆ ಸುಮಾರು 400 ವಿದ್ಯಾರ್ಥಿಗಳು ಅಲ್ಲಿ ಒಂದು ಶೆಡ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಹಾಗೆಯೇ ಅಲ್ಲಿ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳಿಲ್ಲ. ಇಂಥ ಗುತ್ತಿಗೆದಾರರ ಮೇಲೆ ಸರ್ಕಾರ ಏನು ಕ್ರಮ ಜರುಗಿಸುತ್ತದೆ ಎಂದು ಹಾಗೂ ಇವರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಬೇಕೆಂದು ಮತ್ತು ಸದರಿ ಕಾಮಗಾರಿ ನಿಗದಿತ ಸಮಯದಲ್ಲಿ

ಮುಗಿಯುವುದಕ್ಕೆ ಕ್ರಮ ಕೈಗೊಳ್ಳಬೇಕು. ಏಕೆಂದರೆ, ಈಗಾಗಲೇ ಸಾಕಷ್ಟು ವಿಳಂಬವಾಗಿದೆ. ಕೆಲಸ ವಿಳಂಬವಾಗುವುದಕ್ಕೆ ಕಾರಣಕರ್ತರಾಗಿರುವವರ ಮೇಲೆ ಕ್ರಮ ಜರುಗಿಸಬೇಕು. ಹಾಗೆಯೇ ಕಾಲ ಮಿತಿಯೊಳಗೆ ಆ ಒಂದು ಕಾಮಗಾರಿಯನ್ನು ಮುಗಿಸಬೇಕೆಂದು ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಹೇಳಿದ ಹಾಗೆ ಈ ಕಾಲೇಜಿನ ಕಟ್ಟಡವನ್ನು ಕಟ್ಟುವುದಕ್ಕೆ 2 ಕೋಟಿ ರೂಪಾಯಿ ಈಗಾಗಲೇ ಬಿಡುಗಡೆ ಆಗಿದೆ. ಕಟ್ಟಡದ ಕೆಲಸ ನಡೆಯುತ್ತಿದೆ. ಆದರೆ ಅವರು ಹೇಳಿದ ಹಾಗೆ ಸ್ವಲ್ಪ ಮಂದಗತಿಯಲ್ಲಿ ನಡೆಯುತ್ತಿದೆ. ಮೊನ್ನೆ ದಿವಸ ಈ ಬಗ್ಗೆ ಅಧಿಕಾರಿಗಳು ಮತ್ತು ನನ್ನ ಹಂತದಲ್ಲಿ ಕೂಡ ರಿವ್ಯೂ ಮಾಡಿದ್ದೇನೆ. ಈ ಕೆಲಸವನ್ನು ಅಕ್ಟೋಬರ್–ನವೆಂಬರ್, 2014ರೊಳಗೆ ಮುಗಿಸುತ್ತೇವೆ. ಕೇಂದ್ರ ಸರ್ಕಾರದ ರೈಟ್ಸ್ ಸಂಸ್ಥೆಯಿಂದ ಈ ಕೆಲಸ ನಡೆಯುತ್ತಿದೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಅಲ್ಲಿ ಕಳಪೆ ಮಟ್ಟದ ಕಾಮಗಾರಿ ನಡೆಯುತ್ತಿದೆ. ಬೆಂಗಳೂರಿನಲ್ಲಿರುವ ರೈಟ್ಸ್ ಸಂಸ್ಥೆಗೆ ಕೊಡಲಾಗಿದೆ. ಆ ಸಂಸ್ಥೆಯವರು ಅಲ್ಲಿ sublet ಮಾಡುತ್ತಿರುವ ಕೆಲಸವನ್ನು ಯಾರೂ ಸಹ ಪರಿವೀಕ್ಷಣೆ ಮಾಡುತ್ತಿಲ್ಲ. ಇದು ಬಹಳ ಗಂಭೀರವಾದಂಥ ಒಂದು ವಿಷಯವಾಗಿದೆ. ಆದ್ದರಿಂದ, ಸಂಬಂಧಪಟ್ಟವರ ಮೇಲೆ ಕ್ರಮ ಜರುಗಿಸಿ ಇದನ್ನು ಸರಿಪಡಿಸುವಂಥ ಕೆಲಸವನ್ನು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಒಬ್ಬ ವಿಶೇಷ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿ ಅಲ್ಲಿನ ಕಾಮಗಾರಿಯ ಗುಣಮಟ್ಟದ ಬಗ್ಗೆ ವರದಿ ತರಿಸಿ ಆ ವರದಿ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ಅಧ್ಯಕ್ಷರೆ, ರೈಟ್ ಸಂಸ್ಥೆಯ ಕೆಲಸ ಕೇವಲ ಭಾಲ್ಕಿ ಕ್ಷೇತ್ರದಲ್ಲಿ ಮಾತ್ರ ಅಲ್ಲದೆ ಇದು ಇಡೀ ರಾಜ್ಯದ ಎಲ್ಲಾ ಕಡೆ ಇದೆ.

ಅಧ್ಯಕ್ಷರು : ಈ ಪ್ರಶ್ನೆ ನಿಮ್ಮ ಕ್ಷೇತ್ರಕ್ಕೆ ಸಂಬಂಧಪಡುವುದಿಲ್ಲ. ಈ ಬಗ್ಗೆ ನೀವು ಪ್ರತ್ಯೇಕ ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ಅಧ್ಯಕ್ಷರೆ, ರೈಟ್ ಸಂಸ್ಥೆಯವರು ಎಲ್ಲಾ ಕಡೆ ಕೆಲಸ ಮಾಡುತ್ತಿಲ್ಲ .....

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಈ ಸಮಸ್ಯೆ ಆಗಿದೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಮ್ಮ ಕಡೆ ಕೂಡ ಇದೇ ರೀತಿ ಆಗಿದೆ.

ಅಧ್ಯಕ್ಷರು :– ಈ ಬಗ್ಗೆ ನೀವು ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ರೈಟ್ಸ್ ಸಂಸ್ಥೆಯವರು ಎಲ್ಲಾ ಕಡೆ ಇದೇ ರೀತಿಯ ಸಮಸ್ಯೆ ಆಗಿದೆ.

ಅಧ್ಯಕ್ಷರು:– ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ : ಎಲ್ಲಿಯೂ ಕೂಡ ಕೆಲಸ ಆಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು :– ದಯವಿಟ್ಟು ಕುಳಿತುಕೊಳ್ಳಿ. ಈ ಪ್ರಶ್ನೆಯಲ್ಲಿ ನಿಮ್ಮ ಪ್ರಶ್ನೆ ಬರುವುದಿಲ್ಲ. ಮಾನ್ಯ ಸಚಿವರೇ, ಉತ್ತರ ಹೇಳಿ ?

ಶ್ರೀ ಆರ್.ವಿ ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನಮ್ಮ ಶಿಕ್ಷಣ ಇಲಾಖೆಯಲ್ಲಿ ಇಂಜಿನಿಯರಿಂಗ್ ವಿಭಾಗ ಇಲ್ಲ. ಇವತ್ತಿನ ದಿವಸ ಹೊಸದಾಗಿ ಕಟ್ಟುವ ಕಟ್ಟಡವನ್ನು ಹೌಸಿಂಗ್ ಬೋರ್ಡ್, PWD, ಲ್ಯಾಂಡ್ ಆರ್ಮಿ ಮತ್ತು ರೈಟ್ಸ್ ಸಂಸ್ಥೆಗಳು ನಿರ್ಮಾಣ ಮಾಡುತ್ತವೆ. ಇವು ನಾಲ್ಕು ಸಹ ಸರ್ಕಾರಿ ಸಂಸ್ಥೆಗಳಾಗಿವೆ. ಇದರಲ್ಲಿ ಒಂದು ಕೇಂದ್ರ ಸರ್ಕಾರದ್ದು ಮತ್ತು ಮೂರು ರಾಜ್ಯ ಸರ್ಕಾರದ ಸಂಸ್ಥೆಗಳಾಗಿದ್ದು, ಇವುಗಳ ಮುಖಾಂತರ ಕಟ್ಟಡವನ್ನು ನಿರ್ಮಾಣ ಮಾಡಲಾಗುತ್ತದೆ. ಎಲ್ಲಿಯಾದರೂ ಕಳಪೆ ಕಾಮಗಾರಿ ನಡೆಯುತ್ತಿದೆ ಎಂದು ಮಾನ್ಯ ಸದಸ್ಯರ ಅಭಿಪ್ರಾಯ ಇದ್ದಲ್ಲಿ ದಯಮಾಡಿ ನಾಲ್ಕು ಸಾಲುಗಳ ಒಂದು ಪತ್ರವನ್ನು ನನಗೆ ಬರೆಯಿರಿ. ತಕ್ಷಣ ಅಲ್ಲಿಗೆ ವಿಶೇಷ ಅಧಿಕಾರಿಯನ್ನು ಕಳುಹಿಸಿ ಅಲ್ಲಿನ ಕಾಮಗಾರಿಯ ಗುಣಮಟ್ಟವನ್ನು

ಪರಿಶೀಲಿಸಲಾಗುವುದು. ಒಂದು ವೇಳೆ ಆ ಕೆಲಸ ಕಳಪೆ ಗುಣಮಟ್ಟದ್ದು ಆಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶುದ್ಧ ಕುಡಿಯುವ ನೀರಿನ ಸರಬರಾಜು

40(348) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದ ಎಷ್ಟು ಗ್ರಾಮಗಳಲ್ಲಿ ಕೊಳವೆ ಬಾವಿಗಳ ಮೂಲಕ ಶುದ್ಧ ಕುಡಿಯುವ ನೀರಿನ ಯೋಜನೆಯನ್ನು ಕೈಗೊಳ್ಳಲಾಗಿದೆ ; (ಜಿಲ್ಲಾ ಹಾಗೂ ತಾಲ್ಲೂಕುವಾರು ವಿವರ ನೀಡುವುದು)

(ಆ) ಕುಡಿಯುವ ನೀರಿನ ಯೋಜನೆಯನ್ನು ಯಾವ ಯಾವ ಮೂಲಗಳಿಂದ ಅನುಷ್ಠಾನ ಮಾಡಲಾಗಿದೆ ; ಈ ಯೋಜನೆಯಡಿಯಲ್ಲಿ ಎಷ್ಟು ಗ್ರಾಮಗಳಲ್ಲಿ ಕೊಳವೆ ಬಾವಿ ಕೊರೆಯಲಾಗಿದೆ ; ಎಷ್ಟು ಗ್ರಾಮಗಳಲ್ಲಿ ಕೆರೆಗಳಿಂದ ಮತ್ತು ಜಲಾಶಯಗಳಿಂದ ನೀರನ್ನು ಒದಗಿಸಲಾಗಿದೆ ; (ವಿವರ ನೀಡುವುದು)

(ಇ) ಪ್ರಸ್ತುತ ಕುಡಿಯುವ ನೀರನ್ನು ಪೈಪ್‌ಲೈನ್‌ನಿಂದ ಒದಗಿಸುವ ಯೋಜನೆಗಳಲ್ಲಿ ಕೊಳವೆ ಬಾವಿಗಳು ಒಣಗಿ ಹೋಗಿರುವುದು, ಫ್ಲೋರೈಡ್ ಅಂಶವಿರುವುದು, ಕಬ್ಬಿಣ–ಆರ್‌ಸಾನಿಕ್ ಇತ್ಯಾದಿಗಳಿಂದ ಹಾನಿಯಾಗಿರುವ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :–

(ಅ) ರಾಜ್ಯದಲ್ಲಿ ಒಟ್ಟಾರೆ 59753 ಜನವಸತಿಗಳು ಇದ್ದು, ಎಲ್ಲಾ ಜನವಸತಿಗಳಿಗೂ ಕನಿಷ್ಠ ಒಂದು ಕುಡಿಯುವ ನೀರಿನ ಜಲ ಮೂಲ ಒದಗಿಸಲಾಗಿದೆ. ಜಿಲ್ಲಾವಾರು ತಾಲ್ಲೂಕುವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

(ಆ) ಕುಡಿಯುವ ನೀರಿನ ಯೋಜನೆಗಳನ್ನು ಕೊಳವೆ ಬಾವಿ, ತೆರೆದ ಬಾವಿ ಹಾಗೂ ಭೂಮಿಯ ಮೇಲ್ಮೈ ಜಲಮೂಲಗಳಾದ ನದಿ, ಕಾಲುವೆ, ಜಲಾಶಯದ ಮೂಲಗಳಿಂದ ಅನುಷ್ಠಾನ ಮಾಡಲಾಗಿದೆ. ರಾಜ್ಯದ ಕೆರೆ, ಜಲಾಶಯ ಮತ್ತು ಇತರೆ ಮೇಲ್ಮೈ